ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 257
ಮಾನ್ಯ ಸದಸ್ಯರ ಹೆಸರು : ಡಾ.ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13-12-2021
ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಶಾಸ್ತ್ರ, ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕದಲ್ಲಿನ ಯಾವ ಯಾವ ಐತಿಹಾಸಿಕ ಪಾರಂಪರಿಕೆ ಸ್ಮಾರಕಗಳು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುತ್ತಿವೆ;</td><td>ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ರಾಜ್ಯದ ಐತಿಹಾಸಿಕ/ಪಾರಂಪರಿಕ ಸ್ಮಾರಕಗಳ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಕೆಳದಿ ಸಾಮ್ರಾಜ್ಯದ ಕೆಳದಿ, ಇಕ್ಕೇರಿ, ನಗರಕೋಟೆ (ಬಿದನೂರಿನ ಕೋಟೆ) ಹಾಗೂ ತೀರ್ಥಹಳ್ಳಿಯ ಕವಲೇ ದುರ್ಗಗಳಿಗೆ ಕಳೆದ 3 ವರ್ಷಗಳಲ್ಲಿ ಭೇಟಿ ನೀಡಿದ ಪ್ರವಾಸಿಗರೆಷ್ಟು; ಆ ಪೈಕಿ ದೇಶಿಯರು ಹಾಗೂ ವಿದೇಶಿಯರ ಸಂಖ್ಯೆ ನೀಡುವುದು;</td><td>ಕೆಳದಿ, ಇಕ್ಕೇರಿ, ನಗರಕೋಟೆ (ಬಿದನೂರಿನ ಕೋಟೆ) ಹಾಗೂ ತೀರ್ಥಹಳ್ಳಿಯ ಕವಲೇದುರ್ಗ ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ ರವರ ವ್ಯಾಪ್ತಿಗೆ ಒಳಪಡುತ್ತದೆ.

ಅಧೀಕ್ಷಕ ಪುರಾತತ್ವಜ್ಞರು, ಭಾರತೀಯ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ ರವರು, ಈ ಸ್ಮಾರಕಗಳಿಗೆ ಟಿಕೆಟ್ ನೀಡದ ಕಾರಣ, ಪ್ರವಾಸಿಗರ ಒಳಹರಿವಿನ ನಿಖರವಾದ ಮಾಹಿತಿಯನ್ನು ಹೊಂದಿಲ್ಲ. ಆದಾಗ್ಯೂ, ಪ್ರತಿನಿತ್ಯ ಮತ್ತು ಪ್ರತಿವರ್ಷ ಸರಾಸರಿ ಪ್ರವಾಸಿಗರ ಒಳಹರಿವಿನ ಮಾಹಿತಿಯನ್ನು ಈ ಕೆಳಗಿನಂತೆ ಒದಗಿಸಿರುತ್ತಾರೆ.

<table>
<tr><th>ಕ್ರ. ಸಂ.</th><th>ಸ್ಮಾರಕದ ಹೆಸರು</th><th>ಪ್ರತಿನಿತ್ಯ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ</th><th>ಪ್ರತಿ ವರ್ಷದಲ್ಲಿ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ</th></tr>
<tr><td>1</td><td>ರಾಮೇಶ್ವರ ದೇವಸ್ಥಾನ, ಕೆಳದಿ</td><td>100</td><td>36,500</td></tr>
<tr><td>2</td><td>ಅಘೋರೇಶ್ವರ ದೇವಸ್ಥಾನ, ಇಕ್ಕೇರಿ</td><td>200</td><td>73,000</td></tr>
<tr><td>3</td><td>ಶಿವಪ್ಪನಾಯಕ ಕೋಟೆ</td><td>300</td><td>1,09,500</td></tr>
<tr><td>4</td><td>ಕೋಟೆ, ಕವಲೇದುರ್ಗ</td><td>80</td><td>29,200</td></tr>
</table>
</td></tr>
</table>

ಇ)	ಪ್ರವಾಸಿಗರಿಗೆ ಉಳಿದು ಕೊಳ್ಳಲು ಇರುವ ತಂಗುದಾಣ ಹಾಗೂ ಹೋಟೆಲ್ ಗಳ ಸಂಖ್ಯೆ ಎಷ್ಟು;	ಶಿವಮೊಗ್ಗ ಜಿಲ್ಲೆಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ ಅಧಿಕೃತವಾಗಿ ಅನುಮೋದನೆ ಪಡೆದಿರುವ ಹೋಟೆಲ್‌ಗಳ ಸಂಖ್ಯೆ: 20 ಮತ್ತು ಹೋಂ ಸ್ಟೇಗಳ ಸಂಖ್ಯೆ: 37 ಹಾಗೂ ಯಾತ್ರಿನಿವಾಸಗಳ ಸಂಖ್ಯೆ: 21 ಆಗಿರುತ್ತದೆ.
ಈ)	ಕವಲೇ ದುರ್ಗದಂತಹ ಕಠಿಣ ಐತಿಹಾಸಿಕ ತಾಣಕ್ಕೆ ವಾಹನದಲ್ಲಿ ಹೋಗಲು ರಸ್ತೆ ಸಂಪರ್ಕ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ ರಸ್ತೆ ನಿರ್ಮಾಣ ಯಾವಾಗ ಮಾಡಲಾಗುತ್ತದೆ?	ಪ್ರವಾಸೋದ್ಯಮ ಇಲಾಖೆಯಿಂದ ಕವಲೇದುರ್ಗ ಐತಿಹಾಸಿಕ ಪ್ರವಾಸಿ ತಾಣಕ್ಕೆ ಈ ಕೆಳಕಂಡ ರಸ್ತೆ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ. • 2017-18ನೇ ಸಾಲಿನಲ್ಲಿ ಕವಲೇದುರ್ಗ ಐತಿಹಾಸಿಕ ತಾಣಕ್ಕೆ ರಸ್ತೆ ಸಂಪರ್ಕಕ್ಕಾಗಿ ರೂ.150.00ಲಕ್ಷಗಳ ವೆಚ್ಚದಲ್ಲಿ ಕವಲೇದುರ್ಗ ಕೋಟೆ ರಸ್ತೆ ಅಭಿವೃದ್ಧಿ (2 ಕಿ.ಮೀ.) ಕೈಗೊಂಡು ಕಾಮಗಾರಿ ಪೂರ್ಣಗೊಳಿಸಲಾಗಿದೆ. • 2019-20ನೇ ಸಾಲಿನಲ್ಲಿ ಕವಲೇದುರ್ಗ ಕೋಟೆಯ ಮುಖ್ಯ ರಸ್ತೆಯಿಂದ ಕವಲೇದುರ್ಗದವರೆಗೆ ರೂ.50.00ಲಕ್ಷಗಳ ಅಂದಾಜು ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯು ಮಂಜೂರಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗಿದೆ.

TOR 297 TDV 2021

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿ ಶಾಸ್ತ್ರ, ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 257ಕ್ಕೆ ಅನುಬಂಧ

1. ಹಂಪಿ ಸ್ಮಾರಕ ಸಮುಚ್ಚಯಗಳು.
2. ಬಾದಾಮಿ, ಐಹೊಳೆ, ಪಟ್ಟದಕಲ್ಲು ಸ್ಮಾರಕ ಸಮುಚ್ಚಯಗಳು.
3. ಬೇಲೂರಿನ ಚನ್ನಕೇಶವ ದೇವಾಲಯ
4. ಹಳೇಬೀಡಿನ ಕೇದಾರೇಶ್ವರ, ಹೊಯ್ಸಳೇಶ್ವರ ದೇವಸ್ಥಾನ
5. ಶ್ರವಣಬೆಳಗೊಳದ ಚಾವುಂಡರಾಯ ಬಸದಿ ಮತ್ತು ಗೋಮಟೇಶ್ವರ ವಿಗ್ರಹ.
6. ಸಕಲೇಶಪುರದ ಮಂಜರಾಬಾದ್ ಕೋಟೆ.
7. ಚಿತ್ರದುರ್ಗ ಕೋಟೆ
8. ಬೀದರ್ ಕೋಟೆ ಮತ್ತು ಬಸವ ಕಲ್ಯಾಣ ಕೋಟೆ
9. ವಿಜಯಪುರದ ಗೋಲ್ ಗುಂಬಜ್ ಮತ್ತು ಇಬ್ರಾಹಿಂ ರೋಜಾ
10. ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಾಲಯ ಮತ್ತು ನಂದಿ, ಮೈಸೂರು ಅರಮನೆ ಹಾಗೂ ಆವರಣದಲ್ಲಿರುವ ಸ್ಮಾರಕಗಳು
11. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ
12. ಸೋಮನಾಥಪುರದ ಕೇಶವ ದೇವಾಲಯ
13. ತಲಕಾಡಿನ ಮರಳು ದಿನ್ನೆಗಳು
14. ಕೀರ್ತಿನಾರಾಯಣ ಮತ್ತು ವೈದ್ಯೇಶ್ವರ ದೇವಾಲಯ
15. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಬೇಸಿಗೆ ಅರಮನೆ, ಜುಮ್ಮಾ ಮಸೀದಿ, ಟಿಪ್ಪು ಸಮಾಧಿ ಮತ್ತು ಗುಂಬಜ್
16. ಮಂಡ್ಯದ ಮೇಲುಕೋಟೆಯ ಚೆಲುವನಾರಾಯಣ, ಯೋಗನರಸಿಂಹಸ್ವಾಮಿ ದೇವಸ್ಥಾನ ಮತ್ತು ಕಲ್ಯಾಣಿ ಸ್ಮಾರಕ ಸಮುಚ್ಚಯಗಳು
17. ಉಡುಪಿಯ ಶ್ರೀ ಕೃಷ್ಣ ದೇವಾಲಯ, ಪಾಜಕ ಕ್ಷೇತ್ರ, ಕಾರ್ಕಳ ಅನಂತ ಪದ್ಮನಾಭ ದೇವಾಲಯ ಮತ್ತು ಗೋಮಟೇಶ್ವರ ವಿಗ್ರಹ.
18. ಮೂಡಬಿದ್ರಿಯಲ್ಲಿನ ಚೌತರ ಅರಮನೆ
19. ಕೊಡಗಿನ ಅರಮನೆ, ರಾಜಾಸೀಟ್, ರಾಜರ ಸಮಾಧಿಗಳು
20. ಮಂಗಳೂರಿನ ಸುಲ್ತಾನ್ ಬತೇರಿ, ಮಂಗಳಾದೇವಿ ದೇವಾಲಯ
21. ಚಿಕ್ಕಮಗಳೂರಿನ ಬೆಳವಾಡಿಯ ವೀರನಾರಾಯಣ ದೇವಸ್ಥಾನ
22. ಶೃಂಗೇರಿಯ ವಿದ್ಯಾಶಂಕರ ದೇವಾಲಯ
23. ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ
24. ಬೆಂಗಳೂರು ನಗರ ಜಿಲ್ಲೆಯಲ್ಲಿ ಗವಿಗಂಗಾಧರೇಶ್ವರ ದೇವಾಲಯ
25. ದೇವನಹಳ್ಳಿ ಕೋಟೆ, ಟಿಪ್ಪು ಸುಲ್ತಾನ್ ಅರಮನೆ
26. ಶಿವಗಂಗೆಯ ಗಂಗಾಧರೇಶ್ವರ ಮತ್ತು ಹೊನ್ನದೇವಿ ದೇವಾಲಯ
27. ಶಿವಮೊಗ್ಗ, ತೀರ್ಥಹಳ್ಳಿಯ ಕವಲೇದುರ್ಗ ಕೋಟೆ, ಶಿವಪ್ಪನಾಯಕ ಅರಮನೆ, ಹೊಸನಗರದ ಕೋಟೆ
28. ಧಾರವಾಡದ ಕುಂದಗೋಳದ ಶಂಭುಲಿಂಗೇಶ್ವರ ದೇವಾಲಯ
29. ಗದಗ್ ಲಕ್ಕುಂಡಿಯ ಬ್ರಹ್ಮ ಜಿನಾಲಯ, ಮಾಣಿಕೇಶ್ವರ ದೇವಾಲಯ ಮತ್ತು ಬಾವಿ
30. ಡಂಬಳದ ದೊಡ್ಡ ಬಸಪ್ಪ ದೇವಾಲಯ
31. ಸೌಂದತ್ತಿ ಯಲ್ಲಮ್ಮ ದೇವಾಲಯ ಮತ್ತು ಕೋಟೆ
32. ಕಿತ್ತೂರು ಅರಮನೆ
33. ಚಿತ್ರದುರ್ಗದ ಕೋಟೆ ಮತ್ತು ಚಂದ್ರವಳ್ಳಿಯ ಪ್ರಾಗೈತಿಹಾಸಿಕ ನೆಲೆ
34. ದಾವಣಗೆರೆಯ ಹರಿಹರೇಶ್ವರ ದೇವಾಲಯ
35. ಕೋಲಾರದ ಭೋಗನಂದೀಶ್ವರ ಮತ್ತು ಸೋಮೇಶ್ವರ ದೇವಾಲಯ

36. ಹಾವೇರಿಯ ಸಿದ್ದೇಶ್ವರ ದೇವಾಲಯ
37. ಉತ್ತರ ಕನ್ನಡ ಜಿಲ್ಲೆ ಬನವಾಸಿಯ ಮಧುಕೇಶ್ವರ ದೇವಾಲಯ
38. ಗೋಕರ್ಣದ ಮಹಾಲೇಶ್ವರ ದೇವಾಲಯ
39. ಕಲಬುರ್ಗಿಯ ಜುಮ್ಮಾ ಮಸೀದಿ
40. ಕೊಪ್ಪಳ ಜಿಲ್ಲೆಯ ಇಟಗಿಯ ಮಹದೇಶ್ವರ ದೇವಾಲಯ.